2016 ಕ.ತೀ.ವ 401

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್.ಕೆ. ಪಾಟೀಲ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ರತ್ನಕಲಾ

ದೇವರಾಯ ವಿ. ನಾಯಕ್ –ವಿರುದ್ಧ– ಕೆ.ಜೆ. ಸಂತೋಷ್ ಮತ್ತು ಮತ್ತೊಬ್ಬರು*

ಮೋಟಾರು ವಾಹನ ಅಧಿನಿಯಮ 173(1)ನೇ ಪ್ರಕರಣದ ಅಡಿಯಲ್ಲಿ ಎಂ.ಎಫ್.ಎ.ನ್ನು ದಾಖಲು ಮಾಡಲಾಗಿದೆ.

ಕ್ಲೇಮುದಾರ ಅಪೀಲುದಾರನು, ಎಂ.ವಿ.ಸಿ.ಸಂಖ್ಯೆ 606/2012ರಲ್ಲಿ ದಿನಾಂಕ 12ನೇ ಸೆಪ್ಟೆಂಬರ್ 2014ರ ಪ್ರಶ್ನಿತ ತೀರ್ಪು ಮತ್ತು ಐತೀರ್ಪಿನಲ್ಲಿ ನೀಡಿದ ನಷ್ಟಪರಿಹಾರವು ಸಾಕಷ್ಟಿಲ್ಲವೆಂಬ ಆಧಾರದ ಮೇಲೆ ಪರಿಹಾರದ ಮೊತ್ತವನ್ನು ಹೆಚ್ಚಿಸುವಂತೆ ಕೋರಿ ಈ ಅರ್ಜಿಯನ್ನು ಸಲ್ಲಿಸಿದ್ದಾನೆ.

ಕ್ಲೇಮುದಾರನಿಗೆ ನೋವು, ಯಾತನೆ ಗಾಯಗಳಿಗಾಗಿ, ಸಾರಿಗೆ, ಪೌಷ್ಠಿಕ ಆಹಾರ, ನರ್ಸಿಂಗ್ ವೆಚ್ಚ, ವೈದ್ಯಕೀಯ ವೆಚ್ಚ ಹಾಗೂ ಚಿಕಿತ್ಸೆಯ ಅವಧಿಯಲ್ಲಿನ ಆದಾಯದ ನಷ್ಟ ಮುಂತಾದ ಶೀರ್ಷಿಕೆಗಳಡಿಯಲ್ಲಿ ಯುಕ್ತವಾದ ಪರಿಹಾರವನ್ನು ನೀಡಿಲ್ಲವೆಂಬುದು ಅರ್ಜಿದಾರರ ವಾದವಾಗಿದೆ.

ಕ್ಲೇಮುದಾರನು ದೈಹಿಕ ಶಿಕ್ಷಕನಾಗಿ ಸರ್ಕಾರಿ ಶಾಲೆಯಲ್ಲಿ ಸೇವೆ ಸಲ್ಲಿಸುತ್ತಿದ್ದು, ಚಿಕಿತ್ಸೆಯ ಅವಧಿಯಲ್ಲಿ ಬೇಸಿಗೆ ರಜೆ ಇದ್ದು, ತರುವಾಯದ ಅವಧಿಗೆ ಗಳಿಕೆ ರಜೆಯನ್ನು ಪಡೆದಿರುವ ಬಗೆಗೆ ಯಾವ ದಾಖಲೆಯನ್ನು, ರಜಾ ಚೀಟಿಯನ್ನು ಸಹಾ ಹಾಜರುಪಡಿಸದೆ ಇರುವುದರಿಂದ ಚಿಕಿತ್ಸಾ ಅವಧಿಯಲ್ಲಿ ಆದಾಯದ ನಷ್ಟವನ್ನು ತುಂಬಿಕೊಡಲು ಸಾಧ್ಯವಿಲ್ಲವೆಂದಿರುವ ನ್ಯಾಯಾಧಿಕರಣದ ತೀರ್ಪು ಮತ್ತು ಐತೀರ್ಪು ನ್ಯಾಯಸಮ್ಮತವೆಂದು ಅಭಿಪ್ರಾಯಪಟ್ಟಿರುವುದನ್ನು ಎತ್ತಿಹಿಡಿದಿದೆ.

*ಎಂ.ಎಫ್.ಎ. ಸಂಖ್ಯೆ: 8326/2014 (ಎಂವಿ), ದಿನಾಂಕ: 24ನೇ ಮಾರ್ಚ್, 2015.

ಅರ್ಜಿದಾರರ ಪರ : ಶ್ರೀ ಎಚ್. ಪವನ ಚಂದ್ರಶೆಟ್ಟಿ, ವಕೀಲರು,

**ತೀರ್ಪು**

**ನ್ಯಾಯಮೂರ್ತಿ ಶ್ರೀ ಎನ್.ಕೆ. ಪಾಟೀಲ್:**

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸದಸ್ಯರು, ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ, ಕುಂದಾಪುರ, (ಸಂಕ್ಷಿಪ್ತವಾಗಿ, ನ್ಯಾಯಾಧಿಕರಣ) ಇವರಿಂದ ಎಂ.ವಿ.ಸಿ. ಸಂಖ್ಯೆ 606/2012ರಲ್ಲಿ ಮಾಡಿದ ದಿನಾಂಕ 12ನೇ ಸೆಪ್ಟೆಂಬರ್ 2014ರ ಪ್ರಶ್ನಿತ ತೀರ್ಪು ಮತ್ತು ಐತೀರ್ಪಿನ ವಿರುದ್ಧ ಕ್ಲೇಮುದಾರನಿಂದ ಈ ಅಪೀಲನ್ನು ನಿರ್ದೇಶಿಸಲಾಗಿದೆ. ನ್ಯಾಯಾಧಿಕರಣ ಸಾಕಷ್ಟು ಪರಿಹಾರ ನೀಡಿಲ್ಲವೆಂಬ ಕಾರಣದ ಮೇಲೆ, ಪರಿಹಾರದ ಹೆಚ್ಚಳಕ್ಕಾಗಿ ಕೋರಲಾಗಿದೆ.

2. ಅಪೀಲುದಾರನು ಕ್ಲೇಮು ಮಾಡಿರುವಂತೆ ಆತನ ವಯಸ್ಸು ಸುಮಾರು 45 ವರ್ಷಗಳಾಗಿರಬಹುದು ಮತ್ತು ಅಪಘಾತದ ದಿನಾಂಕಕ್ಕೆ ಮುಂಚೆ ದೃಢಕಾಯ ಮತ್ತು ಆರೋಗ್ಯವಾಗಿದ್ದನು. ದಿನಾಂಕ 13.03.2012ರಂದು ಸುಮಾರು ಬೆಳಿಗ್ಗೆ 8.40 ರಲ್ಲಿ, ಅಪೀಲುದಾರನು, ಭಟ್ಕಳದಿಂದ ನಿಧಾನವಾಗಿ ಸಾಬಟ್ಟಿ ಶಾಲೆ ಕಡೆಗೆ ನೋಂದಣಿ ಸಂಖ್ಯೆ ಕೆಎ 20/ಎಲ್524 ಹೊಂದಿದ ತನ್ನ ಮೋಟಾರು ಸೈಕಲ್‌ನ್ನು ರಸ್ತೆಯ ಸರಿಯಾದ ಬದಿಯಲ್ಲಿ ಓಡಿಸುತ್ತಿರುವಾಗ ಮತ್ತು ಭಟ್ಕಳ ಮುರುಕಟ್ಟೆ ಕ್ರಾಸ್ ಹತ್ತಿರ, ಅದೇ ಸಮಯದಲ್ಲಿ ನೋಂದಣಿ ಸಂಖ್ಯೆ ಕೆಎ–21/ಎಚ್–8750 ಎದುರುಗಡೆ ಕಡೆಯಿಂದ ಬರುತ್ತಿದ್ದು, ಸಾಬಟ್ಟೆಯಿಂದ ಮುಟ್ಟಹಳ್ಳಿಯ ಕಡೆಗೆ, ಅದರ ಸವಾರನು ನಿರ್ಲಕ್ಷ್ಯ ಮತ್ತು ದುಡುಕಿನ ರೀತಿಯಲ್ಲಿ ಓಡಿಸುತ್ತಿದ್ದು, ಅಪೀಲುದಾರರ ಮೋಟಾರು ಸೈಕಲ್ ವಿರುದ್ಧ ಡಿಕ್ಕಿ ಹೊಡೆದಿದ್ದು, ಆದುದರಿಂದ, ಅಪೀಲುದಾರನು ರಸ್ತೆ ಮೇಲೆ ಬಿದ್ದಿದ್ದಾನೆ ಮತ್ತು ತೀವ್ರತರ ಗಾಯಗಳು ಉಂಟಾಗಿವೆ ಹಾಗೂ ತನ್ನ ಮೋಟಾರು ಸೈಕಲ್ ಸಹ ಜಖಂಗೊಂಡಿದೆಯೆಂದು ಅವರು ವಾದಿಸಿದ್ದಾರೆ.

3. ಅಪಘಾತದಲ್ಲಿ ಉಂಟಾದ ಗಾಯಗಳ ಕಾರಣದಿಂದ, ಆತನು, ತೀವ್ರ ನೋವು ಮತ್ತು ಯಾತನೆಗೆ ಒಳಗಾಗಿದ್ದು, ಆತನು, ವೈದ್ಯಕೀಯ ವೆಚ್ಚಗಳು ಮತ್ತು ಇತರೇ ಅನುಷಂಗಿಕ ವೆಚ್ಚಗಳು ಸೇರಿದಂತೆ ಸಾರಿಗೆ, ನರ್ಸಿಂಗ್ ಆಹಾರ ಮತ್ತು ಸೇವಕ ವೆಚ್ಚಗಳ ಸಲುವಾಗಿ ಸಾಕಷ್ಟು ಮೊತ್ತವನ್ನು ಖರ್ಚು ಮಾಡಿದ್ದಾನೆ. ಆದ್ದರಿಂದ, ಆತನಿಗೆ ಸಾಕಷ್ಟು ಪರಿಹಾರ ನೀಡಬೇಕು ಎಂಬುದು ಆತನ ಮುಂದುವರೆದ ವಾದವಾಗಿದೆ.

4. ಅಪಘಾತದಲ್ಲಿ ಉಂಟಾದ ಗಾಯಗಳ ಕಾರಣದಿಂದ, ಪ್ರತ್ಯರ್ಜಿದಾರರ ವಿರುದ್ಧ, 27,00,000/– ರೂಪಾಯಿಗಳ ಮೊತ್ತದ ಪರಿಹಾರಕ್ಕೆ ಕೋರಿ, ನ್ಯಾಯಾಧಿಕರಣದ ಮುಂದೆ, ಮೋಟಾರು ವಾಹನಗಳ ಅಧಿನಿಯಮದ 166ನೇ ಪ್ರಕರಣದ ಅಡಿಯಲ್ಲಿ ಅಪೀಲುದಾರನು, ಕ್ಲೇಮು ಅರ್ಜಿಯನ್ನು ದಾಖಲು ಮಾಡಿದ್ದಾನೆ.

5. ನ್ಯಾಯಾಧಿಕರಣವು, ರಸ್ತೆ ಸಂಚಾರ ಅಪಘಾತದಲ್ಲಿ ಉಂಟಾದ ಗಾಯಗಳ ಕಾರಣದಿಂದ ಅಂಗವೈಕಲ್ಯತೆ, ಗಾಯದ ನೋವು ಮತ್ತು ಯಾತನೆಗಳ ಸಲುವಾಗಿ ಸಾಕಷ್ಟು ಪರಿಹಾರವನ್ನು ನೀಡದೇ ಒಟ್ಟಾರೆಯಾಗಿ ತಪ್ಪು ಮಾಡಿದೆ ಮತ್ತು ಚಿಕಿತ್ಸೆಯ ಅವಧಿಯಲ್ಲಿ ಆದಾಯದ ನಷ್ಟ ಮತ್ತು ಭವಿಷ್ಯತ್ತಿನ ಗಳಿಕೆಗಳ ನಷ್ಟ ಸೇರಿದಂತೆ ಹಾಗೂ ಸಾರಿಗೆ, ನರ್ಸಿಂಗ್, ಆಹಾರ ಮತ್ತು ಸೇವಕ ವೆಚ್ಚಗಳ ಸಲುವಾಗಿ ಯಾವುದೇ ಪರಿಹಾರವನ್ನು ನೀಡಿಲ್ಲವೆಂದು ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯವರು ತಮ್ಮ ವಾದವನ್ನು ಮಂಡಿಸಿದ್ದಾರೆ. ಆದ್ದರಿಂದ, ನ್ಯಾಯಾಧಿಕರಣ ನೀಡಿದ ಪ್ರಶ್ನಿತ ತೀರ್ಪು ಮತ್ತು ಐತೀರ್ಪು, ಎಲ್ಲಾ ಶೀರ್ಷಿಕೆಗಳ ಅಡಿಯಲ್ಲಿ ಯುಕ್ತ ಪರಿಹಾರವನ್ನು ಹೆಚ್ಚಿಸಬೇಕು ಮತ್ತು ಭವಿಷ್ಯತ್ತಿನ ಗಳಿಕೆಯ ನಷ್ಟ ಮತ್ತು ಚಿಕಿತ್ಸೆ ಅವಧಿಯಲ್ಲಿ ಆದಾಯದ ನಷ್ಟದ ಸಲುವಾಗಿ ಪರಿಹಾರ ನೀಡಬೇಕು ಮತ್ತು ರಸ್ತೆ ಸಂಚಾರ ಅಪಘಾತದಲ್ಲಿ ಉಂಟಾದ ಗಾಯಗಳ ಸ್ವರೂಪ ಮತ್ತು ಅಂಗವೈಕಲ್ಯತೆಗೆ ಸಂಬಂಧಪಟ್ಟಂತೆ, ಸಾರಿಗೆ, ನರ್ಸಿಂಗ್, ಆಹಾರ ಮತ್ತು ಸೇವಕ ವೆಚ್ಚಗಳು ಸೇರಿದಂತೆ ಮಾರ್ಪಾಡಿಸುವುದಕ್ಕೆ ಹೊಣೆಯಾಗುತ್ತದೆಯೆಂದು ನಿವೇದಿಸಿದ್ದಾರೆ.

6. ಅಪೀಲುದಾರನ ಪರವಾಗಿ ಹಾಜರಾದ ಮಾನ್ಯ ನ್ಯಾಯವಾದಿಯ ವಾದವನ್ನು ಎಚ್ಚರಿಕೆಯಿಂದ ಪರಿಗಣಿಸಿದ ತರುವಾಯ ಮತ್ತು ತೀರ್ಪು ಸೇರಿದಂತೆ ಅಪೀಲಿನ ಜ್ಞಾಪನ ಪತ್ರದಲ್ಲಿ ಒತ್ತಿಹೇಳಿದ ಕಾರಣಗಳನ್ನು ಹಾಗೂ ನ್ಯಾಯಾಧಿಕರಣದಿಂದ ನೀಡಿದ ತೀರ್ಪು ಪರಿಶೀಲಿಸಿದ ತರುವಾಯ, ರಸ್ತೆ ಅಪಘಾತದಲ್ಲಿ ಅಪೀಲುದಾರರಿಗೆ ಉಂಟಾದ ಗಾಯಗಳ ಕಾರಣದಿಂದ ನ್ಯಾಯಾಧಿಕರಣವು ವಾರ್ಷಿಕ 6%ರಂತೆ ಬಡ್ಡಿಯೊಂದಿಗೆ 1,16,410/- ರೂಪಾಯಿಗಳ ಐತೀರ್ಪು ನೀಡಿದ ಪರಿಹಾರದಲ್ಲಿ ನಮಗೆ ಯಾವುದೇ ತಪ್ಪು ಅಥವಾ ಅಂಥ ಮುಖ್ಯ ಕ್ರಮ ದೋಷ ಇಲ್ಲವೆಂಬುದು ಮೇಲ್ನೋಟಕ್ಕೆ ಸ್ಪಷ್ಟವಾಗಿ ಕಂಡು ಬರುತ್ತದೆ.

7. ದಾಖಲೆ ಮೇಲೆ ಲಭ್ಯವಿರುವ ಎಲ್ಲಾ ಸಾಮಗ್ರಿಯನ್ನು ಪರಿಶೀಲಿಸಿದ ತರುವಾಯ, ಅಪಘಾತ ಸಂಭವಿಸಿದೆ ಮತ್ತು ಅಪೀಲುದಾರನಿಗೆ ಉಂಟಾದ ಗಾಯಗಳ ಪರಿಣಾಮಗಳ ಕಾರಣದಿಂದ ಅದು ವಿವಾದಿತವಾಗುವುದಿಲ್ಲವೆಂದು ಕಂಡು ಬರುತ್ತದೆ. ರಸ್ತೆ ಸಂಚಾರ ಅಪಘಾತದ ಕಾರಣದಿಂದ ಅಪೀಲುದಾರನಿಗೆ, ಪ್ರಸ್ತುತ ಬಲ ಕಿವಿಯ ಮೇಲೆ ಉಂಟಾದ ಗಾಯದಿಂದ ರಕ್ತ ಹರಿದುಬಂದಿದ್ದು, ಹಣೆಯ ಮೇಲೆ ಉದ್ದವಾಗಿ 2" ಗಾಯ ಆಗಿದೆ ಹಾಗೂ ಗಾಯದ ಪ್ರಮಾಣಪತ್ರದ ಪ್ರಕಾರ ತಲೆಗೆ ಗಾಯವಾದ ಪರಿಣಾಮವಾಗಿ ಹೆಚ್ಚಿನ ಚಿಕಿತ್ಸೆಗೆ ಕಳುಹಿಸಲಾಗಿದೆ ಮತ್ತು ದಿನಾಂಕ 13.3.2012ರಿಂದ 30.3.2012ರ ವರೆಗೆ ಒಳರೋಗಿಯಾಗಿ ಕೆ.ಎಂ.ಸಿ. ಆಸ್ಪತ್ರೆ ಮಣಿಪಾಲ್‌ನಲ್ಲಿ ಚಿಕಿತ್ಸೆ ಪಡೆದುಕೊಂಡಿದ್ದಾನೆಂಬುದು ಯಾವುದೇ ರೀತಿಯಲ್ಲಿ ವಿವಾದವಾಗಿರುವುದಿಲ್ಲ. ಅಪೀಲುದಾರನಿಗೆ, ಸುಮಾರು 45 ವರ್ಷಗಳಾಗಿತ್ತು ಮತ್ತು ತೆಂಗಿನಗುಂಡಿ ಹೆಬ್ಬಾಳ ಪ್ರೌಢಶಾಲೆ, ಭಟ್ಕಳದಲ್ಲಿ ದೈಹಿಕ ಶಿಕ್ಷಣ ಶಿಕ್ಷಕನಾಗಿ ಕಾರ್ಯ ನಿರ್ವಹಿಸುತ್ತಿದ್ದು, ವೇತನ ಪಡೆಯುತ್ತಿದ್ದನೆಂಬುದು ಸಹಾ ವಿವಾದಿತವಲ್ಲ.

8. ಡಿಸ್‌ಚಾರ್ಜ್ ಸಮ್ಮರಿ, ನಿಶಾನೆ.ಪಿ9 ಬಲಗೈ ಕೀಲು ಸಬ್ ಲೋಕೇಷನ್ ಕಾರ್ಪೋಮೆಟಾಕಾರ್ಪಲ್ ನೊಂದಿಗೆ ಬಲ ಜೆಎಂಸಿ ಮುರಿತದೊಂದಿಗೆ ಸ್ಕ್ವಾಮಸ್ ಕಪೋಲ ಮೂಳೆಯೊಂದಿಗೆ ಆತನ ತಲೆಗೆ ಗಾಯವುಂಟಾಗಿದ್ದು, ಅಪೀಲುದಾರನಿಗೆ ರೋಗ ನಿರ್ಣಯ ಮಾಡಲಾಗಿದೆಯೆಂಬುದು ಕಂಡು ಬಂದಿದೆ. ಇದಲ್ಲದೇ, ಪ್ರಾ.ಸಾ.2,

ಕೆಎಂಸಿ, ಮಣಿಪಾಲ್‌ನ ಓರಲ್ ಮತ್ತು ಮ್ಯಾಕ್ಸಿಲೋಫೇಶಿಯಲ್ ಸರ್ಜರಿಯ ಪ್ರೋಫೆಸರ್ ಮತ್ತು ಮುಖ್ಯಸ್ಥರಾಗಿದ್ದು, ಅಪೀಲುದಾರನಿಗೆ, ಆತನ ಫೇಶಿಯಲ್ ಸಮಸ್ಯೆಗಳು ಶೇ.10 ರಿಂದ ಶೇ.12ರ ವರೆಗೆ ಅಂಗವೈಕಲ್ಯತೆ ಉಂಟಾಗಿದೆಯೆಂದು ಹೇಳಿಕೆ ನೀಡಿದ್ದಾರೆ. ಆದ್ದರಿಂದ, ಉಂಟಾದ ಗಾಯಗಳ ಸ್ವರೂಪವನ್ನು ಪರಿಗಣನೆಗೆ ತೆಗೆದುಕೊಳ್ಳಲಾಗಿದೆ ಮತ್ತು ಚಿಕಿತ್ಸೆಗೆ ಒಳಗಾದ ಸ್ವರೂಪ ಮತ್ತು ಅವಧಿ ಸೇರಿದಂತೆ, ಮತ್ತು ವೈದ್ಯಕೀಯ ಬಿಲ್ಲನ್ನು ಸಹ ಹಾಜರುಪಡಿಸಿದ್ದು, ನ್ಯಾಯಾಧಿಕರಣ, ಗಾಯ, ನೋವು ಮತ್ತು ಯಾತನೆಗಳ ಸಲುವಾಗಿ 40,000/– ರೂಪಾಯಿಗಳು ಮತ್ತು ವೈದ್ಯಕೀಯ ವೆಚ್ಚಗಳ ಸಲುವಾಗಿ 32,410/– ರೂಪಾಯಿಗಳನ್ನು ನೀಡಲಾಗಿದೆ.

9. ಇದಲ್ಲದೇ, ಪ್ರಾ.ಸಾ. 1 ತನ್ನ ಹೇಳಿಕೆಯಲ್ಲಿ, ಆತನು ದೈಹಿಕ ಶಿಕ್ಷಣ ಶಿಕ್ಷಕನಾಗಿ ತೆಂಗಿನಗುಂಡಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾನೆ ಮತ್ತು ಪ್ರತಿತಿಂಗಳು 23,907/–ರೂಪಾಯಿಗಳ ವೇತನ ಪಡೆದುಕೊಳ್ಳುತ್ತಿದ್ದಾನೆಂದು ಹೇಳಿದ್ದಾನೆ. ಆತನು ಅಪಘಾತದ ಗಾಯಗಳ ಕಾರಣದಿಂದ ಕೆಲಸಕ್ಕೆ ಹಾಜರಾಗಿರುವುದಿಲ್ಲ ಮತ್ತು ಆದಾಯದ ನಷ್ಟ ಅನುಭವಿಸಿದ್ದಾನೆ. ಆತನು, ಸರ್ಕಾರಿ ಪ್ರೌಢಶಾಲೆ, ತೆಂಗಿನಗುಂಡಿ ಇವರು ನೀಡಿರುವ ನಿಶಾನೆ.ಪಿ 8 ವೇತನ ಪ್ರಮಾಣಪತ್ರವನ್ನು ಹಾಜರುಪಡಿಸಿದ್ದಾನೆ ಮತ್ತು ಆತನು, ಸುಮಾರು 8 ತಿಂಗಳು ಹಾಜರಾಗಿಲ್ಲವೆಂದು ಹೇಳಿದ್ದಾನೆ. ಮತ್ತು ಗಳಿಕೆ ಸಾಮರ್ಥ್ಯದ ನಷ್ಟವನ್ನು ಅನುಭವಿಸಿದ್ದಾನೆ. ಅಂಗವೈಕಲ್ಯತೆಯನ್ನು ರುಜುವಾತುಪಡಿಸಲು, ಆತನನ್ನು ಪ್ರಾ.ಸಾ.2 ಆಗಿ ಕೆ.ಎಂ.ಸಿ.ಯ ಮೌಖಿಕ ಮತ್ತು ಮೆಕ್ಸಿಲೋಫೆಶಿಯೋ ಸರ್ಜನ್ ಅವರನ್ನು ಪರೀಕ್ಷಿಸಿದ್ದು, ಅಪೀಲುದಾರನು ಅನುಭವಿಸುತ್ತಿರುವ ಸಮಸ್ಯೆಗೆ ಸಂಬಂಧಿಸಿದಂತೆ ಆತ ತನ್ನ ಹೇಳಿಕೆ ನೀಡಿದ್ದಾರೆ ಹಾಗೂ ಆತನಿಗೆ ಚಿಕಿತ್ಸೆ ನೀಡಿರುವ ಸ್ವರೂಪವು ಸೇರಿದಂತೆ ಹಾಗೂ ಅಪೀಲುದಾರನು, ಶೇ.10 ರಿಂದ ಶೇ.12ರಷ್ಟು ಅಂಗವೈಕಲ್ಯತೆಯಿಂದ ಬಳಲುತಿದ್ದಾನೆಂದು ಅಭಿಪ್ರಾಯಪಟ್ಟಿರುವುದು ಸಂದೇಹವಾಗಿರುವುದಿಲ್ಲ, ಅಪೀಲುದಾರನ, ವೈದ್ಯಕೀಯ ದಾಖಲೆಗಳ ಪ್ರಕಾರ, ಆತನ ಹಣೆ ಮತ್ತು ಮುಖ ಹಾಗೂ ಕಪೋಲ ಮೂಳೆ ಮುರಿದು, ಗಾಯಗಳು ಉಂಟಾಗಿರುವುದರಲ್ಲಿ ಸಂದೇಹವಿಲ್ಲ, ಆದರೆ ಇದರಿಂದಾಗಿ ಅಪೀಲುದಾರನು ಹೇಳಿರುವಂತೆ ಗಳಿಕೆಯ ಸಾಮರ್ಥ್ಯದಿಂದ ಬಾಧಿತನಾಗಿದ್ದಾನೆಯೇ ಎನ್ನುವುದು

ಪ್ರಶ್ನೆಯಾಗಿದೆ. ಈ ಸಂಬಂಧದಲ್ಲಿ ಪ್ರಾ.ಸಾ.1 ಮತ್ತು 2ರ ಪಾಟೀ ಸವಾಲು, ತುಂಬಾ ಪ್ರಸಕ್ತವಾಗಿದೆ ಮತ್ತು ನಿಶಾನೆ.ಪಿ 8 ವೇತನ ಪ್ರಮಾಣಪತ್ರವಾಗಿದ್ದು, ಅಪೀಲುದಾರನು, ಅಪಘಾತದ ದಿನಾಂಕದಂದು ಪ್ರತಿತಿಂಗಳು 23,907/– ವೇತನವನ್ನು ಪಡೆದುಕೊಳ್ಳುತ್ತಿದ್ದನೆಂಬುದು ಕಂಡು ಬಂದಿದೆ. ಪ್ರತ್ಯರ್ಜಿದಾರನ ವೇತನ ಪ್ರಮಾಣಪತ್ರವು, ವಿವಾದಿತವಾಗಿರುವುದಿಲ್ಲ. ಪ್ರಾ.ಸಾ.1 ರ ಸಾಕ್ಷ್ಯದ ಪ್ರಕಾರ, ಅಪೀಲುದಾರನು, ಸುಮಾರು 3 ತಿಂಗಳು ಕಾರ್ಯ ನಿರ್ವಹಿಸಿರುವುದಿಲ್ಲ ಮತ್ತು ಜೂನ್ ತಿಂಗಳಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದಾನೆಂಬುದು ಸ್ಪಷ್ಟವಾಗಿದೆ. ಆದಾಗ್ಯೂ, ಆತನು, ಏಪ್ರಿಲ್ 10 ರಿಂದ ಮೇ 31ರ ವರೆಗೆ, ಶಾಲೆಗೆ ರಜೆಯಿತ್ತು ಮತ್ತು ಆತನು, ಸದರಿ ತಿಂಗಳುಗಳು, ಅಂದರೆ, ಚಿಕಿತ್ಸಾ ಅವಧಿಯ ಸಮಯದಲ್ಲಿ ಸಹ ವೇತನ ಪಡೆದುಕೊಂಡಿದ್ದಾನೆಂದು ಸಹ ಹೇಳಲಾಗಿದೆ. ಆತನು ಚಿಕಿತ್ಸೆಯ ಅವಧಿಯ ಸಮಯದಲ್ಲಿ ಗಳಿಕೆ ರಜೆ ಪಡೆದುಕೊಂಡಿದ್ದಾನೆ ಎಂಬುದು ಅಪೀಲುದಾರನ ಪ್ರಕರಣವಾಗಿರುವುದಿಲ್ಲ. ಆತನು, ನ್ಯಾಯಾಲಯದ ಮುಂದೆ ರಜೆ ಪ್ರಮಾಣಪತ್ರವನ್ನು ಹಾಜರುಪಡಿಸಿರುವುದಿಲ್ಲ. ಆತನು, ಗಳಿಕೆರಜೆ ಪಡೆದುಕೊಂಡಿದ್ದಲ್ಲಿ, ಆತನು, ಅದನ್ನು ರುಜುವಾತುಪಡಿಸಲು ದಸ್ತಾವೇಜುಗಳನ್ನು ಹಾಜರುಪಡಿಸುವುದು. ಅಷ್ಟೇ ಅಲ್ಲದೇ, ಗಳಿಕೆ ರಜೆ ನಷ್ಟದ ಸಂದರ್ಭದಲ್ಲಿ, ಆತನು, ಸದರಿ ಅವಧಿಯ ಪರಿಹಾರಕ್ಕೆ ಹಕ್ಕುಳ್ಳವನಾಗಿರುತ್ತಾನೆ. ಆತನ ಮೌಖಿಕ ಸಾಕ್ಷ್ಯವನ್ನು ಹೊರತುಪಡಿಸಿ ತನ್ನ ವಾದಕ್ಕೆ ಪೂರಕವಾದ ದಸ್ತಾವೇಜು ಸಾಕ್ಷ್ಯವನ್ನು ಒದಗಿಸಿರುವುದಿಲ್ಲ. ಹಾಗೆಯೇ, ಆತನು, ಗಳಿಕೆರಜೆ ಪಡೆದುಕೊಂಡಿಲ್ಲವೆಂದು ಊಹಿಸಬಹುದು ಮತ್ತು ತತ್ಪರಿಣಾಮವಾಗಿ, ರಸ್ತೆ ಸಂಚಾರ ಅಪಘಾತದಲ್ಲಿ ಅವನಿಗೆ ಉಂಟಾದ ಗಾಯಗಳ ಕಾರಣದಿಂದ ಗಳಿಕೆ ರಜೆ ಅಥವಾ ಆದಾಯದ ನಷ್ಟ ಅನುಭವಿಸಿರುವುದಿಲ್ಲ. ಆದ್ದರಿಂದ, ಆತನು, ಹೇಳಲಾದ ಅವಧಿಯ ಆದಾಯದ ಶೀರ್ಷಿಕೆಯ ನಷ್ಟದ ಅಡಿಯಲ್ಲಿ ಯಾವುದೇ ಪರಿಹಾರಕ್ಕಾಗಿ ಹಕ್ಕುಳವರಾಗಿರುವುದಿಲ್ಲ. ನ್ಯಾಯಾಧಿಕರಣ ನೀಡಿದ ಸದರಿ ಕಾರಣವು, ನ್ಯಾಯ ಸಮ್ಮತ, ಯುಕ್ತ ಮತ್ತು ಉಚಿತವಾಗಿದೆ ಮತ್ತು ಅದರಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯವಿರುವುದಿಲ್ಲ.

10. ಭವಿಷ್ಯತ್ತಿನ ಗಳಿಕೆಯ ಸಾಮರ್ಥ್ಯದ ನಷ್ಟದಷ್ಟರ ಮಟ್ಟಿಗೆ, ಸಂಬಂಧಪಟ್ಟಂತೆ, ಅಪೀಲುದಾರ, ಪ್ರಾ.ಸಾ.1 ಪಾಟೀ ಸವಾಲಿನಲ್ಲಿ ಕೆಳಗಿನಂತೆ ಹೇಳಿದ್ದಾರೆ. **"ಡಿಸೆಂಬರ್**

**೨೦13ಕ್ಕೆ ನನಗೆ ಸುಮಾರು ರೂ.೨೫,೦೦೦–೦೦ ಸಂಬಳವಿತ್ತು. ಅಪಘಾತದ ನಂತರ ನನಗೆ ಸಂಬಳದಲ್ಲಿ ಕಡಿಮೆ ಆಗಿಲ್ಲ, ಸಂಬಳದಲ್ಲಿ ಬಡ್ತಿಯನ್ನು ಬೇರೆಯವರಿಗೆ ಕೊಟ್ಟ ಹಾಗೆ ನನಗೂ ಕೊಟ್ಟಿದ್ದಾರೆ. ಮೊದಲ ಮೊದಲು ಮಾಡುತ್ತಿದ್ದ ಕೆಲಸವನ್ನು ಈಗಲೂ ಮಾಡುತ್ತಿದ್ದೇನೆ**''.

11. ಪ್ರಾ.ಸಾ. 2 ಪಾಟೀ ಸವಾಲಿನಲ್ಲಿ ಕೆಳಗಿನಂತೆ ಹೇಳಿದ್ದಾನೆ, ''**ಅರ್ಜಿದಾರನಿಗೆ ದೈಹಿಕ ಶಿಕ್ಷಕನಾಗಿ ಕೆಲಸ ಮಾಡಲು ಮತ್ತು ದೈನಂದಿನ ಕೆಲಸ ಮಾಡಲು ತೊಂದರೆ ಇಲ್ಲ. ಅರ್ಜಿದಾರನಿಗೆ ಅಂಗ ನ್ಯೂನತೆ ಇರುತ್ತಿದ್ದರೆ ಅಂಗ ನ್ಯೂನತೆ ಪ್ರಮಾಣ ಪತ್ರ ಕೊಡುತ್ತಿದ್ದ**''.

12. ಪ್ರಾ.ಸಾ.ಗಳು 1 ಮತ್ತು 2ರ ಸಾಕ್ಷ್ಯವು, ಉದ್ಯೋಗ ವೃಂದದಲ್ಲಾಗಲಿ ಅಥವಾ ವೇತನದಲ್ಲಾಗಲಿ ಯಾವುದೇ ಇಳಿತಾಯ, ಭವಿಷ್ಯತ್ತಿನ ಗಳಿಕೆಯ ಯಾವುದೇ ನಷ್ಟವನ್ನಾಗಲಿ ಅಪೀಲುದಾರನು ಅನುಭವಿಸಿಲ್ಲವೆಂಬುದನ್ನು ಸ್ಪಷ್ಟವಾಗಿ ತೋರಿಸುತ್ತದೆ. ಆದಾಗ್ಯೂ, ಅಪೀಲುದಾರನು, ಭವಿಷ್ಯತ್ತಿನ ಗಳಿಕೆ ಸಾಮರ್ಥ್ಯದ ನಷ್ಟದ, ಶೀರ್ಷಿಕೆಯ ಅಡಿಯಲ್ಲಿ ಯಾವುದೇ ಪರಿಹಾರಕ್ಕೆ ಹಕ್ಕುಳ್ಳವರಾಗಿರುವುದಿಲ್ಲ.

13. ಆದಾಗ್ಯೂ, ಉಂಟಾದ ಗಾಯಗಳ ಸ್ವರೂಪವನ್ನು ಪರಿಗಣನೆಗೆ ತೆಗೆದುಕೊಂಡು, ವೈದ್ಯರ ವಯಸ್ಸು, ವೃತ್ತಿ, ಅಂಗವೈಕಲ್ಯತೆ ಇತ್ಯಾದಿಯನ್ನು ನಿರ್ಧರಿಸಿ, ನ್ಯಾಯಾಧಿಕರಣವು, ಸೌಕರ್ಯಗಳ ನಷ್ಟ, ಅಸೌಕರ್ಯಗಳು ಮತ್ತು ಭವಿಷ್ಯತ್ತಿನ ಅಸಂತೋಷದ ನಷ್ಟದ ಸಲುವಾಗಿ 35,000/– ರೂ.ಗಳ ಮೊತ್ತದ ಪರಿಹಾರ ನೀಡಲಾಗಿದೆ. ಹಾಗೆಯೇ ನ್ಯಾಯಸಮ್ಮತ ಮತ್ತು ಯುಕ್ತವಾಗಿದೆ ಹಾಗೂ ಹಾಗೆಯೇ ಅದರಲ್ಲಿ ಹಸ್ತಕ್ಷೇಪ ಮಾಡುವುದು ಅನಗತ್ಯವಾಗಿದೆ.

14. ಸಂಬಂಧಪಟ್ಟ, ವಾಹನಕ್ಕೆ ಉಂಟಾದ ಜಖಂಗಳ ಸಲುವಾಗಿ ಪರಿಹಾರ ನೀಡುವಷ್ಟರ ಮಟ್ಟಿಗೆ, ಪ್ರಾ.ಸಾ.1 ತನ್ನ ಹೇಳಿಕೆಯಲ್ಲಿ, ನೋಂದಣಿ ಸಂಖ್ಯೆ ಕೆಎ 30 ಎಲ್ 524 ಹೊಂದಿದ ಮೋಟಾರು ಸೈಕಲ್‌ನ ಆರ್.ಸಿ ಮಾಲೀಕರಾಗಿದ್ದಾರೆಂದು

ಹೇಳಲಾಗಿದೆ. ಅಪಘಾತದ ಕಾರಣದಿಂದ, ಅಪೀಲುದಾರನ ಮೋಟಾರು ಸೈಕಲ್ ಜಖಂ ಆಗಿದೆ ಮತ್ತು ಆತನು, ಜೀವೋತ್ತಮ ಆಟೋ ಮೊಬೈಲ್ಸ್, ಭಟ್ಕಳದಲ್ಲಿ ರಿಪೇರಿ ಮಾಡಿಸಿಕೊಳ್ಳಲಾಗಿದೆ ಮತ್ತು ನಿಶಾನೆ ಪಿ.4 ನಲ್ಲಿ ಗುರುತು ಮಾಡಿದ ಐಎಂವಿ ವರದಿಯನ್ನು ಹಾಜರುಪಡಿಸಲಾಗಿದೆ. ನಿಶಾನೆ ಪಿ.4 ಪ್ರಕಾರ, ನೋಂದಣಿ ಸಂಖ್ಯೆ ಕೆಎ–30–ಎಲ್–524 ಹೊಂದಿದ ಮೋಟಾರು ಸೈಕಲ್‌ಗೆ ಈ ಮುಂದಿನ ಜಖಂಗಳು ಉಂಟಾಗಿವೆ:

1. ಮುಂಭಾಗದ ನಂಬರ್ ಪ್ಲೇಟ್‌ಗೆ ಜಖಂ,
2. ಹೆಡ್‌ಲೈಟ್ ಗಾಜು ಜಖಂ,
3. ಮುಂಭಾಗದ ಬಲಗಡೆ ಇಂಡಿಕೇಟರ್ ಜಖಂ,
4. ಬಲಭಾಗದ ಲೆಗ್‌ಗಾರ್ಡ್ ಜಖಂ,
5. ಎಡಭಾಗದ ಹಿಂದಿನ ಇಂಡಿಕೇಟರ್ ಜಖಂ,
6. ಎಡಭಾಗದ ಮುಂದಿನ ಫುಟ್ ರೆಸ್ಟ್ ಜಖಂ.

15. ಪಾಟೀ ಸವಾಲಿನಲ್ಲಿ, ಪ್ರತ್ಯರ್ಜಿದಾರನು, ಇದಕ್ಕೆ ಸಂಬಂಧಪಟ್ಟಂತೆ, ನಿಶಾನೆ ಪಿ.4 ಅಥವಾ ಪ್ರಾ.ಸಾ.1ರ ವಿವಾದಿತ ಒಳಾಂಶಗಳನ್ನು ಪ್ರಶ್ನಿಸಿರುವುದಿಲ್ಲ. ನಿಶಾನೆ ಪಿ.13ರ ಪ್ರಕಾರ, ಅಪೀಲುದಾರನಿಗೆ, 9,074/– ರೂ.ಗಳನ್ನು ಹೆಚ್ಚಿಸಿದ್ದು, ಹಾಗೆಯೇ ಅದನ್ನು ಅಂಗೀಕರಿಸಿದ್ದು, ನ್ಯಾಯಾಧಿಕರಣವು ಮೋಟಾರು ಸೈಕಲ್ ರಿಪೇರಿ ಸಲುವಾಗಿ 9,000/– ರೂ.ಗಳನ್ನು ನೀಡಿದೆ. ಹಾಗೆಯೇ ನ್ಯಾಯಸಮ್ಮತ ಮತ್ತು ಯುಕ್ತವಾಗಿದೆ ಹಾಗೂ ನ್ಯಾಯಾಲಯ ಹಸ್ತಕ್ಷೇಪ ಮಾಡುವ ಅಗತ್ಯವಿರುವುದಿಲ್ಲ.

16. ಹೀಗಾಗಿ, ನ್ಯಾಯಾಧಿಕರಣವು, ಆ ವಿಷಯದ ಪ್ರತಿಯೊಂದು ಅಂಶವನ್ನು ಪರಿಗಣನೆಗೆ ತೆಗೆದುಕೊಂಡು, ಉಂಟಾದ ಅಂಥ ಗಾಯಗಳ ಸ್ವರೂಪದಂತೆ, ವಯಸ್ಸು, ವೃತ್ತಿ, ಚಿಕಿತ್ಸೆಯ ಸ್ವರೂಪ ಮತ್ತು ಅವಧಿ, ವೈದ್ಯರು ನಿರ್ಧರಿಸಿದ ಅಂಗವೈಕಲ್ಯತೆ ಇತ್ಯಾದಿಯು, ನ್ಯಾಯ ಸಮ್ಮತವಾಗಿದ್ದು, ಗಾಯ, ನೋವು ಮತ್ತು ಯಾತನೆಗಳ ಸಲುವಾಗಿ 40,000/– ರೂ.ಗಳು, ವೈದ್ಯಕೀಯ ವೆಚ್ಚಗಳ ಸಲುವಾಗಿ 32,410/–

ರೂಪಾಯಿಗಳು, ಅಂಗವೈಕಲ್ಯತೆಯ ಕಾರಣದಿಂದ ಸೌಕರ್ಯಗಳ ನಷ್ಟ, ಅಸೌಕರ್ಯ ಮತ್ತು ಅಸಂತೋಷದ ಸಲುವಾಗಿ 35,000/– ರೂ.ಗಳು ಮತ್ತು ವಾಹನ ರಿಪೇರಿ ಚಾರ್ಜುಗಳ ಸಲುವಾಗಿ 9,000/– ರೂ.ಗಳು. ರಸ್ತೆ ಸಂಚಾರ ಅಪಘಾತದಲ್ಲಿ ಅಪೀಲುದಾರನಿಗೆ ಉಂಟಾದ ತೀವ್ರತರ ಗಾಯಗಳ ಕಾರಣದಿಂದ ಒಟ್ಟು 1,16,410/– ರೂ.ಗಳ ಪರಿಹಾರವನ್ನು ನೀಡಲಾಗಿದೆ.

17. 17 ರಿಂದ 22ನೇ ಪ್ಯಾರಾಗ್ರಾಫ್‌ಗಳಲ್ಲಿ ಈ ಹಿಂದೆ ಹೇಳಿದ ಪರಿಹಾರವನ್ನು ನೀಡುವುದಕ್ಕಾಗಿ ನ್ಯಾಯಾಧಿಕರಣ ನೀಡಿದ ಕಾರಣವು, ನ್ಯಾಯಸಮ್ಮತ ಮತ್ತು ಯುಕ್ತವಾಗಿದೆ. ಹಾಗಾಗಿ, ಅಪೀಲುದಾರನು, ಅಂಥ ಹಸ್ತಕ್ಷೇಪ ಮಾಡುವ ಯಾವುದೇ ಉತ್ತಮ ಕಾರಣಗಳನ್ನು ನೀಡದೇ ಇರುವುದರಿಂದ, ನ್ಯಾಯಾಧಿಕರಣವು ನೀಡಿದ ತೀರ್ಪು ಉತ್ತಮ ಪರಿಗಣನೆ, ಉತ್ತಮ ಸುಸ್ಥಾಪಿತ ಮತ್ತು ಉತ್ತಮ ತರ್ಕವಾಗಿದ್ದು, ಅದರಲ್ಲಿ ಹಸ್ತಕ್ಷೇಪ ಮಾಡುವ ಯಾವುದೇ ಸಮರ್ಥನೆ ಅಥವಾ ಉತ್ತಮ ಕಾರಣ ನಮಗೆ ಕಂಡು ಬರುವುದಿಲ್ಲ.

18. ಈ ಮೇಲಿನ ಕಾರಣಗಳಿಗಾಗಿ, ಅಪೀಲುದಾರನು ದಾಖಲು ಮಾಡಿದ ಅಪೀಲು, ಗುಣಾವಗುಣಗಳನ್ನು ಹೊಂದಿಲ್ಲದಿರುವುದರಿಂದ ವಜಾ ಮಾಡಲು ಹೊಣೆಯಾಗುತ್ತದೆ. ಅದಕ್ಕನುಸಾರವಾಗಿ, ಅದನ್ನು ವಜಾ ಮಾಡಲಾಗಿದೆ.

ತದನುಸಾರವಾಗಿ ಕಚೇರಿಯ, ಐತೀರ್ಪನ್ನು ಪಡೆದುಕೊಳ್ಳುವುದು.